## (ಅ) ಫಲಿತ ಜ್ಯೋತಿಷ

✍ ಡಾ. ಭಾಸ್ಕರ ಭಟ್ಟ ಜೋಶಿ

"ಜ್ಯೋತೀಂಷಿ ಗ್ರಹನಕ್ಷತ್ರಾಣಿ ತಾನ್ಯಧಿಕೃತ್ಯ ಕೃತಂ ಶಾಸ್ತ್ರಂ ಜ್ಯೋತಿಶ್ಶಾಸ್ತ್ರಮ್". ಅಂದರೆ ಗ್ರಹನಕ್ಷತ್ರಗಳು ಜ್ಯೋತಿಗಳು, ಅವುಗಳನ್ನಾಧರಿಸಿ ರಚಿಸಿದ ಶಾಸ್ತ್ರವೇ ಜ್ಯೋತಿಶ್ಶಾಸ್ತ್ರ ಎಂಬುದಾಗಿ ಸಂಸ್ಕೃತದ ಗ್ರಂಥಗಳು ವಿವರಣೆಗಳನ್ನು ನೀಡುತ್ತಿವೆ. ಜ್ಯೋತಿಶ್ಶಾಸ್ತ್ರವು ಮಾನವನಿಗೆ ಅತ್ಯಾವಶ್ಯಕವಾದ ಹಾಗೂ ನಿತ್ಯೋಪಯುಕ್ತ ಶಾಸ್ತ್ರ. ಭವಿಷ್ಯದ ಬಗೆಗೆ ಕುತೂಹಲ ಮಾನವ ಸಹಜವಾದುದರಿಂದ ಅದನ್ನು ತಿಳಿಯಲು ಆತನ ಶಾಸ್ತ್ರೀಯ ಪ್ರಯತ್ನ ಬಹಳ ಹಿಂದಿನ ಕಾಲದಿಂದಲೂ ನಡೆದುಬಂದಿದೆ.

**ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದಸಾಂ ಚಯಃ ।**
**ಜ್ಯೋತಿಷಾಮಯನಂಚೈವ ವೇದಾಂಗಾನಿ ಷಡೇವ ತು ॥**

ಈ ಶಾಸ್ತ್ರವು ವೇದಾಂಗಗಳಲ್ಲೊಂದಾಗಿದೆ. ವೇದಾಂಗಗಳು ಸಾಂಪ್ರದಾಯಿಕವಾಗಿ ವೇದಗಳ ಅಧ್ಯಯನ ಮತ್ತು ಅರಿವಿಗೆ ಸಂಬಂಧಿಸಿದ ಆರು ಪೂರಕ ಅಂಗಗಳು. ಇವು ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷ. ವೇದಾರ್ಥಕ್ಕೆ ಶಬ್ದಶಾಸ್ತ್ರದ ಉಪಯೋಗವಿರುವುದು ಸರಿ, ಆದರೆ ಹೇಗೆ ಜ್ಯೋತಿಷ್ಯದ ಉಪಯೋಗ ಮತ್ತು ವೇದಾಂಗಗಳಲ್ಲಿ ಗಣನೆ? ಇದಕ್ಕೆ ಸಮಧಾನ ಇಲ್ಲಿದೆ,

**"ವೇದಾ ಹಿ ಯಜ್ಞಾರ್ಥಮಭಿಪ್ರವೃತ್ತಾಃ ಕಾಲಾನುಪೂರ್ವ್ಯಾ ವಿಹಿತಾಶ್ಚ ಯಜ್ಞಾಃ ।**
**ತಸ್ಮಾದಿದಂ ಕಾಲವಿಧಾನಶಾಸ್ತ್ರಂ ಯೋ ಜ್ಯೋತಿಷಂ ವೇದ ಸ ವೇದಯಜ್ಞಮ್ ॥"**[೧]

ವೇದೋಕ್ತವಾದ ಯಜ್ಞಾನುಷ್ಠಾನಕರ್ಮಗಳನ್ನು ಮಾಡುವ ಸೂಕ್ತ ಕಾಲವನ್ನು ತಿಳಿದು ಸೂಕ್ತ ರೀತಿಯಲ್ಲಿ ಆಚರಿಸಲು ಜ್ಯೋತಿರ್ವಿಜ್ಞಾನದ ಅರಿವು ಅತ್ಯಾವಶ್ಯಕವಾಗಿದೆ. ಹಾಗಾಗಿಯೇ ಈ ಶಾಸ್ತ್ರವು ವೇದಾಂಗಗಳಲ್ಲಿ ಪಠಿತವಾಗಿದೆ.

### ಜ್ಯೋತಿಷ್ಯ ಶಾಸ್ತ್ರದ ಪ್ರಾಮುಖ್ಯತೆ:

**ಯಥಾ ಶಿಖಾ ಮಯೂರಾಣಾಂ ನಾಗಾನಾಂ ಮಣಯೋ ಯಥಾ।**
**ತದ್ವದ್ವೇದಾಂಗಶಾಸ್ತ್ರಾಣಾಂ ಜ್ಯೋತಿಷಂ ಮೂರ್ಧನಿ ಸ್ಥಿತಮ್॥**[೨]

---

೧. ವೇದಾಂಗ ಜ್ಯೋತಿಷಮ್, ೩
೨. ವೇದಾಂಗ ಜ್ಯೋತಿಷಮ್, ೪

ಈ ಶಾಸ್ತ್ರವನ್ನು ಹೀಗೆ ಕೊಂಡಾಡಿದ್ದಾರೆ ನಮ್ಮ ಪೂರ್ವಿಕರು. ಹಾಗಾಗಿಯೇ ಈ ಶಾಸ್ತ್ರಕ್ಕೆ ತನ್ನದೇಯಾದಂತಹ ಸ್ಥಾನಮಾನಗಳಿರುವುದು ವೇದಾಂಗಗಳಲ್ಲಿ.

**ತಸ್ಮಾದ್ವೇದಾಂಗಶಾಸ್ತ್ರಾಣಾಂ ಪ್ರಧಾನಂ ಜ್ಯೋತಿಷಂ ಸ್ಮೃತಮ್ ।**
**ಯಸ್ಮಾದೇತದ್ವಿನಾ ಶಾಸ್ತ್ರಂ ಕಾಲಜ್ಞಾನಂ ನ ಸಿದ್ಧ್ಯತಿ ॥**[೩]

ಈ ರೀತಿಯಾದಂತಹ ಬಹೂಪಯೋಗಿ ಶಾಸ್ತ್ರವು ಸಕಲ ಜೀವರಾಶಿಗಳಿಗು ಎಲ್ಲ ಹಂತಗಳಲ್ಲಿ ಮಾರ್ಗದರ್ಶನವನ್ನು ನೀಡುವುದರಿಂದ ಈ ಶಾಸ್ತ್ರಕ್ಕೆ ಬಹಳ ಪ್ರಾಮುಖ್ಯತೆಯನ್ನು ನೀಡಿದ್ದಾರೆ ನಮ್ಮ ಆರ್ಷಪರಂಪರೆಯಲ್ಲಿ. ಭೂಮಿ ಮತ್ತು ಗ್ರಹಗಳ ಚಲನೆಯಿಂದ ಕಾಲವನ್ನು ಅಳೆದು ಧಾರ್ಮಿಕ, ಆರ್ಥಿಕ ಮತ್ತು ವ್ಯವಸಾಯ ವ್ಯವಹಾರಗಳಿಗೆ ಬೇಕಾದ ವರ್ಷ, ಆಯನ, ಋತು, ಮಾಸ, ಪಕ್ಷ, ವಾರ, ನಕ್ಷತ್ರ, ತಿಥಿ, ಯೋಗ, ಕರಣದಿರೂಪವಾದ ಕಾಲವನ್ನು ಈ ಶಾಸ್ತ್ರವು ನಿರ್ಧರಿಸುತ್ತದೆ.

**ಜ್ಯೋತಿಶ್ಶಾಸ್ತ್ರದ ಕಾಲ**

ವೇದಗಳ ಕಾಲದಷ್ಟು ಪ್ರಾಚೀನತೆ ಈ ಶಾಸ್ತ್ರಕ್ಕೆ ಇದೆ. 'ದರ್ಶಪೂರ್ಣಮಾಸಾಭ್ಯಾಂ ಯಜೇತ', 'ವಸಂತೇ ವಸಂತೇಜ್ಯೋತಿಷಾ ಯಜೇತ', 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ್', 'ಶರದಿ ವೈಶ್ಯಃ'[೪] ಇತ್ಯಾದಿಗಳಿಂದ ತತ್ತ ತ್ಕಾಲದಲ್ಲಿ ವಿಧಿಸಿದ ಯಾಗಗಳು ಇವುಗಳು ಎಂಬುದಾಗಿ ತಿಳಿಯುತ್ತದೆ. ವೇದೋಕ್ತವಾದ ಯಾಗಗಳನ್ನು ಅನುಷ್ಠಾನಗಳಿಸಬೇಕೆಂದರೆ, ಕಾಲಜ್ಞಾನ ಅತ್ಯಂತ ಪ್ರಾಮುಖ್ಯವನ್ನು ಪಡೆಯುತ್ತದೆ. ಈ ಕಾಲಜ್ಞಾನವನ್ನು ತಿಳಿಸಿಕೊಡುವುದು ಈ ಶಾಸ್ತ್ರವೆ. ಆದ್ದರಿಂದಲೆ ಇದನ್ನು ಕಾಲವಿಧಾಯಕ ಶಾಸ್ತ್ರವೆಂದು ಕರೆಯಲಾಗಿದೆ.

**ವಿಭಾಗ :**

ಜ್ಯೋತಿಶ್ಶಾಸ್ತ್ರವು ಪ್ರಧಾನವಾಗಿ ಸಿದ್ಧಾಂತ, ಸಂಹಿತಾ ಮತ್ತು ಹೊರಾ ಎಂಬುದಾಗಿ ಮೂರು ಅಂಗಗಳಿಂದ ಕೂಡಿದೆ.

**ಸಿದ್ಧಾಂತಸಂಹಿತಾಹೋರಾರೂಪಸ್ಕಂಧತ್ರಯಾತ್ಮಕಮ್ ।**
**ವೇದಸ್ಯ ನಿರ್ಮಲಂ ಚಕ್ಷುಃ ಜ್ಯೋತಿಶ್ಶಾಸ್ತ್ರಮ್ಅತ್ತಮಮ್ ॥**[೫]

---

೩. ನಾರದ ಸಂಹಿತಾ
೪. ತೈತ್ತರೀಯ ಬ್ರಾಹ್ಮಣ
೫. ನಾರದ ಸಂಹಿತೆ, ೧.೪

ಈ ಮೂರು ವಿಭಾಗಗಳಲ್ಲಿ ಫಲಿತಜ್ಯೋತಿಷವು ಒಂದು. ಹೋರಾ ಎಂಬುದು ಇದರ ಪರ್ಯಾಯವಾಚಿಯಾಗಿದೆ. ಬೃಹಜ್ಜಾತಕದಲ್ಲಿ ಹೋರಾಶಾಸ್ತ್ರದ ಸ್ವರೂಪವನ್ನು ಹೀಗೆ ತಿಳಿಸಿದ್ದಾರೆ,

**ಹೋರೇತ್ಯಹೋರಾತ್ರ ವಿಕಲ್ಪಮೇಕೆ ।**
**ವಾಂಛಂತಿ ಪೂರ್ವಾಪರವರ್ಣಲೋಪಾತ್ ।**
**ಕರ್ಮಾರ್ಜಿತಂ ಪೂರ್ವಭವೇ ಸದಾದಿ**
**ಯತ್ತಸ್ಯ ಪಕ್ತಿಂ ಸಮಭಿವ್ಯನಕ್ತಿ ॥**[೬]

ಯಾವ ಶಾಸ್ತ್ರವು ಕರ್ಮಾರ್ಜಿತವಾದಂತಹ ಶುಭಾಶುಭಫಲಗಳ ಚಿಂತನೆಯನ್ನು ಜಾತಕಾದಿಗಳಿಂದ ತಿಳಿಸಿಕೊಡುತದೆಯೋ ಅದುವೆ ಫಲಿತಜ್ಯೋತಿಷ. ಉತ್ತಮ ದಶಾ ಅಥವಾ ಇತರ ಶುಭಪ್ರದ ಗ್ರಹದ ದಶಾಭುಕ್ತಿ, ಗೋಚರಸ್ಥಿತಿಯ ಸಮಯದಲ್ಲಿ ನಾವು ಜನ್ಮಾಂತರದ ಶುಭಕರ್ಮಗಳಿಗೆ ಅನುಸಾರವಾಗಿ ಸುಖ, ಸಂತೋಷ, ಸಂಪತ್ತುಗಳನ್ನು ಹೊಂದುತ್ತೇವೆ. ಇಲ್ಲಿಯೂ ಗ್ರಹರು ಕರ್ಮಫಲ ಸೂಚಕ ಪಾತ್ರವನ್ನೇ ಹೊಂದಿರುವರು. ಜನ್ಮಾಂತರದಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲಗಳನ್ನು ತಿಳಿಯುವ ವ್ಯವಸ್ಥೆಯೇ ಈ ಹೋರಾಶಾಸ್ತ್ರ ಅಥವಾ ಫಲಜೌತಿಷ ಎನಿಸಿದೆ. ಅದ್ದರಿಂದಲೇ–

**ವಿಧಾತ್ರಾ ಲಿಖಿತಾ ಯಾ ಸಾ ಲಲಾಟೇಽಕ್ಷರಮಾಲಿಕಾ।**
**ದೈವಜ್ಞಸ್ತಾಂ ಪಠೇದ್ವ್ಯಕ್ತಂ ಹೋರಾನಿರ್ಮಲಚಕ್ಷುಷಾ॥**

ಎಂಬ ಉಕ್ತಿಯು ಪ್ರಸಿದ್ಧವಾಗಿರುವುದು. ನಾವು ಹುಟ್ಟುವಾಗ ಬ್ರಹ್ಮನಿಂದ ಬರೆಯಲ್ಪಟ್ಟ ಪ್ರಾರಬ್ಧಕರ್ಮವನ್ನು ದೈವಜ್ಞರು ಹೋರಾಶಾಸ್ತ್ರವೆಂಬ ನಿರ್ಮಲವಾದ ಕಣ್ಣಿನಿಂದ ತಿಳಿಯುವರು. ಹೋರಾವು ಮೂರು ವಿಭಾಗದಲ್ಲಿ ವಿಂಗಡಿಸಲಾಗಿದೆ. ಜಾತಕ, ಪ್ರಶ್ನ, ಮುಹೂರ್ತ ಎಂಬುದಾಗಿ.

**ಜಾತಕ**

**ಯದುಪಚಿತಮನ್ಯಜನ್ಮನಿ ಶುಭಾಽಶುಭಂ ತಸ್ಯ ಕರ್ಮಣಃ ಪಕ್ತಿಮ್ ।**
**ವ್ಯಂಜಯತಿ ಶಾಸ್ತ್ರಮೇತತ್ ತಮಸಿ ದ್ರವ್ಯಾಣಿ ದೀಪ ಇವ ॥**

ಕತ್ತಲಿನಲ್ಲಿ ಇರುವವಸ್ತುಗಳು ಕಣ್ಣಿಗೆ ಕಾಣಿಸಬೇಕಂದರೆ ದೀಪದ ಅಪೇಕ್ಷೆ ಹೇಗೆ ಇರುವುದೋ ಅದೆ ತೆರನಾಗಿ ಜನ್ಮಾಂತರದಲ್ಲಿ ಮಾಡಿದ ಶುಭಾಶುಭಕರ್ಮಗಳ ಫಲಗಳನ್ನು ತಿಳಿಯುವುದು ಈ ಶಾಸ್ತ್ರದಿಂದ (ಜಾತಕಾದಿಗಳಿಂದ).

---

೬. ಬೃಹಜ್ಜಾತಕ

## ಗ್ರಹಗಳು- ಭಾವಗಳು

ಜ್ಯೋತಿಶ್ಯಾಸ್ತ್ರದಲ್ಲಿ ಮೇಷಾದಿ ದ್ವಾದಶರಾಶಿಗಳು, ಲಗ್ನಾದಿ ದ್ವಾದಶಭಾವಗಳು ಪ್ರಸಿದ್ಧವಾಗಿವೆ.

**ಹೋರಾದಯಸ್ತನು ಕುಟುಂಬ ಸಹೋತ್ಥ ಬಂಧು ।**
**ಪುತ್ರಾರಿ ಪತ್ನಿಮರಣಾನಿ ಶುಭಾಸ್ಪದಾಯಾಃ ॥**
**ರಿಃಫಾಖ್ಯಮಿತ್ಯುಪಚಯಾನ್ಯರಿ ಕರ್ಮಲಾಭ**
**ದುಶ್ಚಿಕ್ಯ ಸಂಜ್ಞಿತ ಗೃಹಾಣಿನ ನಿತ್ಯಮೇಕೇ ॥**

ಲಗ್ನಾದಿ ಹನ್ನೆರಡು ಭಾವಗಳಿಗೆ ಕ್ರಮವಾಗಿ ತನು, ಕುಟುಂಬ, ಸಹೋತ್ಥ, ಬಂಧು, ಪುತ್ರ, ಅರಿ, ಪತ್ನಿ, ಮರಣ, ಶುಭ, ಆಸ್ಪದ, ಆಯಾ, ರಿಃಫ, ಈ ಪ್ರಕಾರವಾಗಿ ಸಂಜ್ಞೆಗಳೆಂದು ತಿಳಿಯಬೇಕು ಆರು, ಹತ್ತು, ಹನ್ನೊಂದು, ಮೂರು ಲಗ್ನಾದಿ ಈ ಭಾವಗಳಿಗೆ ಉಪಚಯ ಸ್ಥಾನಗಳೆಂದೂ ಸಂಜ್ಞೆಗಳು ಕೆಲವರು ನಿತ್ಯವಲ್ಲವೆಂದೂ ಹೇಳುತ್ತಾರೆ.

**॥ ಭಾವ ಸಂಜ್ಞೆಗಳು ॥**

| | | | | | | |
|---|---|---|---|---|---|---|
| ಭಾವ | ಲಗ್ನ | ದ್ವಿತೀಯ | ತೃತೀಯ | ಚತುರ್ಥ | ಪಂಚಮ | ಷಷ್ಠ |
| ಸಂಜ್ಞಾ | ತನು | ಕುಟುಂಬ | ಸಹೋತ್ಥ | ಬಂಧು | ಪುತ್ರ | ಅರಿ |
| ಭಾವ | ಸಪ್ತಮ | ಅಷ್ಟಮ | ನವಮ | ದಶಮ | ಏಕಾದಶ | ದ್ವಾದಶ |
| ಸಂಜ್ಞಾ | ಪತ್ನಿ | ಮರಣ | ಶುಭ | ಆಸ್ಪದ | ಆಯ | ರಿಃಫ |

ಶುಭಾಶುಭಫಲಗಳ ಚಿಂತನೆಯನ್ನು ಜಾತಕಾದಿಗಳಿಂದ ತಿಳಿಯಲು ಗ್ರಹಗಳ ಮತ್ತು ಭಾವಗಳ ಅರಿವು ಅತ್ಯಾವಶ್ಯಕ. ಯಾವ ಭಾವದಲ್ಲಿ ಯಾವ ಗ್ರಹಗಳು ಬಂದಾಗ ಶುಭಾಶುಭಫಲಗಳನ್ನು ನೀಡುತ್ತಾರೆ ಎಂಬುದನ್ನು ಶಾಸ್ತ್ರದಲ್ಲಿ ಈ ರೀತಿ ನಿರ್ಣಯಿಸಲಾಗಿದೆ.

**ಸೌಮ್ಯಾನಾಂ ವ್ಯಯ-ಮೃತ್ಯು-ಶತ್ರು-ಸಹಜಾಃ ನೇಷ್ಟಾಃ ಅಭೀಷ್ಟಾಃ ಪರೇ ।**
**ಪಾಪಾನಾಮ್ ಅಭಿಮಾತಿ-ಸೋದರ-ಭಾವಾಃ ಇಷ್ಟಾಃ ಅನಿಷ್ಟಾಃ ಪರೇ॥** [೭]

ಶುಭಗ್ರಹಗಳಿಗೆ ತೃತೀಯ-ಷಷ್ಠ-ಅಷ್ಟಮ ದ್ವಾದಶಭಾವಗಳು ಇಷ್ಟವಲ್ಲ. ಮಿಕ್ಕೆಲ್ಲ ಭಾವಗಳು ಅಭೀಷ್ಟಗಳಾಗಿವೆ. ಅರ್ಥಾತ್ ಲಗ್ನ, ದ್ವಿತೀಯ, ಚತುರ್ಥ,

೭. ಪ್ರಶ್ನಮಾರ್ಗ-೧೪-

ಪಂಚಮ, ಸಪ್ತಮ, ನವಮ, ಏಕಾದಶ ಭಾವಗಳಲ್ಲಿದ್ದರೆ ಶುಭಗ್ರಹಗಳು ಶುಭಫಲ-ಪ್ರದಾಯಕರಾಗಿರುತ್ತಾರೆ. ಜಾತಕದಲ್ಲಿ ಶುಭಗ್ರಹಗಳು ಲಗ್ನಾತ್ ತೃತೀಯ, ಷಷ್ಠ, ಅಷ್ಟಮ, ದ್ವಾದಶಭಾವಗಳಲ್ಲಿ ಇದ್ದರೆ ತಮ್ಮ ಶುಭಫಲಗಳನ್ನು ಕೊಡಲಾರರು. ಬದಲಿಗೆ ತಮಗೆ ಸಂಬಂಧಿಸಿದ ಕಾರಕಪದಾರ್ಥಗಳಿಂದ ಅನಿಷ್ಟಫಲಗಳನ್ನೇ ಉಂಟುಮಾಡುವರು. ಹೇಗೆಂದರೆ, ಗುರುಗ್ರಹನು ತೃತೀಯಾದಿ ಭಾವಗಳಲ್ಲಿದ್ದರೆ ವಿದ್ಯೆ, ಜ್ಞಾನ, ಸದಾಚಾರಾದಿ ಶುಭಫಲಗನ್ನು ನೀಡಲಾರನು, ಪರಂತು ವಿರುದ್ಧವಾದಂತಹ ಅವಿದ್ಯಾದಿ ಫಲಗಳನ್ನೇ ನೀಡುವನು. ಶುಕ್ರಗ್ರಹನು ತೃತೀಯಾದಿ ಅನಿಷ್ಟಭಾವಗಳಲ್ಲಿದ್ದರೆ ತನ್ನ ಸುಖಭೋಗಾದಿ ಶುಭಫಲಗಳನ್ನು ನೀಡದೆ, ಸ್ತ್ರೀವಿಷಯಕವಾದ ತೊಂದರೆಗಳನ್ನೇ ನೀಡುವನು.

ಕ್ಷೀಣಚಂದ್ರ ಮತ್ತು ಪಾಪಯುಕ್ತ ಬುಧರಿಗೆ ಪಾಪಗ್ರಹಗಳಂತೆ ತೃತೀಯ, ಷಷ್ಠ, ಅಷ್ಟಮ, ದ್ವಾದಶಭಾವಗಳನ್ನು ಬಿಟ್ಟು ಉಳಿದೆಲ್ಲಾ ಭಾವಗಳು ಗ್ರಾಹ್ಯಗಳಾಗಿ ಶುಭಫಲಪ್ರದಗಳಾಗಿವೆ.

## ಬಲಯೋಗದಿಂದ ಫಲಗಳು

ತಮ್ಮ ಇಷ್ಟ ಅಥವಾ ಅನಿಷ್ಟ ಭಾವಗಳಲ್ಲಿ ಸ್ಥಿತರಾದ ಗ್ರಹಗಳು ಸ್ಥಾನಾದಿ ಷಡ್‌ಬಲಗಳಿಂದ ಸಹಿತರಾದಾಗ ತಾವು ಸೂಚಿಸುವ ಶುಭಫಲಗಳನ್ನು ಅಧಿಕವಾಗಿ ಕೊಡುವರು. ಅಶುಭಫಲಗಳನ್ನು ಅಲ್ಪಪ್ರಮಾಣದಲ್ಲಿ ನೀಡುವರು. ಅದೇ ರೀತಿ ಸ್ಥಾನಾದಿ ಷಡ್ಬಲಗಳಿಂದ ರಹಿತರಾದಾಗ ತಾವು ಸೂಚಿಸುವ ಅಶುಭಫಲಗಳನ್ನು ಅಲ್ಪಪ್ರಮಾಣದಲ್ಲಿ ನೀಡುವರು. ಈ ವಿಷಯವನ್ನು ಪ್ರಶ್ನಮಾರ್ಗವು ಹೀಗೆ ತಿಳಿಸಿದೆ,

**ಯೇನ ಗ್ರಹೇಣ ಯತ್ ಪ್ರೋಕ್ತಮ್ ಅಶುಭಂ ವಾ ಶುಭಂ ಫಲಮ್ ।**
**ಬಲೀ ಚೇತ್ಸಶುಭಂ ಪೂರ್ಣಮ್ ಅಶುಭಂ ದುರ್ಬಲೋ ಯದಿ ॥**[೮]

ಯಾವ ಗ್ರಹದಿಂದ ಅಶುಭ ಅಥವಾ ಶುಭಫಲವು ಜಾತಕಾದಿಗಳಲ್ಲಿ ಹೇಳಲ್ಪಟ್ಟಿದೆಯೋ, ಆ ಗ್ರಹವು ಪ್ರಬಲವಾಗಿದ್ದರೆ ಮಾತ್ರ ಶುಭಫಲಗಳನ್ನು ಸಂಪೂರ್ಣವಾಗಿ ನೀಡುತ್ತದೆ. ದುರ್ಬಲವಾಗಿದ್ದರೆ ಅಶುಭಫಲಗಳನ್ನು ಸಂಪೂರ್ಣವಾಗಿ ನೀಡುತ್ತದೆ.

ಈ ರೀತಿ ಬಲಗಳಿಂದಾಗುವ ಶುಭಾಶುಭಫಲಗಳ ಏರಿಳಿತವನ್ನು ವರಾಹಮಿಹಿರಾಚಾರ್ಯರು ಹೀಗೆ ತಿಳಿಸಿದ್ದಾರೆ,

---

೮. ಪ್ರಶ್ನಮಾರ್ಗ

**ಸ್ವೋಚ್ಚತ್ರಿಕೋಣಸ್ವಸುಹೃತ್ ಶತ್ರು-ನೀಚಗೃಹಾರ್ಕಗೈಃ ।**
**ಶುಭಂ ಸಂಪೂರ್ಣ-ಪಾದೋನ-ದಲ-ಪಾದ-ಅಲ್ಪ-ನಿಷ್ಫಲಮ್ ॥[೯]**

ಯಾವುದೇ ಗ್ರಹನು ತನ್ನ -

- ಉಚ್ಚಸ್ಥಾನದಲ್ಲಿದ್ದರೆ ಶುಭ-ಸಂಪೂರ್ಣ ಮತ್ತು ಅಶುಭ- ಶೂನ್ಯ.
- ಮೂಲತ್ರಿಕೋಣರಾಶಿಯಲ್ಲಿದ್ದರೆ ಶುಭ-ಮುಕ್ಕಾಲು, ಅಶುಭ- ಕಾಲು.
- ಸ್ವಕ್ಷೇತ್ರದಲ್ಲಿದ್ದರೆ ಶುಭ- ಅರ್ಧ, ಅಶುಭ- ಅರ್ಧ.
- ಮಿತ್ರಕ್ಷೇತ್ರದಲ್ಲಿದ್ದರೆ ಶುಭ-ಪಾದ, ಅಶುಭ- ಮುಕ್ಕಾಲು.
- ಶತ್ರುಕ್ಷೇತ್ರದಲ್ಲಿದ್ದರೆ ಶುಭ- ಅಲ್ಪ, ಅಶುಭ- ಅಧಿಕ.
- ನೀಚ ಅಥವಾ ಮೌಢ್ಯನಾಗಿದ್ದರೆ ಶುಭ-ಶೂನ್ಯ, ಅಶುಭ-ಸಂಪೂರ್ಣ.

**ಕಾರಕಾದಿ ವಿಚಾರ**

ಕಾರಕ ಎಂದರೆ ಕರೋತಿ ಎಂದೇ ಅರ್ಥ. ಹೋರಾಶಾಸ್ತ್ರದಲ್ಲಿ ಯಾವ ಪದಾರ್ಥಗಳ ಮೂಲಕ ಸೂರ್ಯಾದಿಗ್ರಹಗಳು ತಮ್ಮ ಶುಭಾಶುಭಫಲಗಳನ್ನು ನೀಡುವರೋ ಅದನ್ನು ಅವರ ಕಾರಕಪದಾರ್ಥಗಳೆಂದು ವಿಭಾಗ ಮಾಡಲಾಗಿದೆ. ರವಿಗ್ರಹನು ದ್ವಾದಶರಾಶಿಗಳಲ್ಲಿ ತನ್ನ ಸ್ಥಿತಿಭೇದದಿಂದ ತಂದೆಯ ವಿಷಯವಾಗಿ ಶುಭಾಶುಭವನ್ನು ಸೂಚನೆ ಮಾಡುವುದರಿಂದ ರವಿಯನ್ನು ಪಿತೃಕಾರಕ ಎನ್ನಲಾಗಿದೆ. ಇದೇ ರೀತಿ ಮಿಕ್ಕ ಗ್ರಹಗಳ ಕಾರಕ ವಿಚಾರವು ಕೆಳಗಿನಂತಿದೆ,

| ಗ್ರಹಗಳು | ಕಾರಕ | ಗ್ರಹಗಳು | ಕಾರಕ |
|---|---|---|---|
| ರವಿ | ಪಿತೃ | ಚಂದ್ರ | ಮಾತೃ |
| ಮಂಗಳ | ಭ್ರಾತೃ | ಬುಧ | ಮಾತುಲ |
| ಗುರು | ಪುತ್ರ | ಶುಕ್ರ | ಭಾರ್ಯ |
| ಶನಿ | ಭೃತ್ಯ | | |

ಹೀಗೆ ವಿಭಾಗವನ್ನು ಕಾಣಬಹುದು. ಜಗತ್ತಿನ ಎಲ್ಲಾ ಪದಾರ್ಥಗಳನ್ನು ನವಗ್ರಹರಿಗೆ ಹಾಗೂ ದ್ವಾದಶರಾಶಿಗಳಿಗೆ ಹಂಚಿ ಹಾಕಬೇಕಾದ್ದು ಫಲಚಿಂತನೆ ಮಾಡಲು ಅನಿವಾರ್ಯವಾಗಿದ್ದು ಇದನ್ನೇ ಗ್ರಹಗಳ ಕಾರಕವಿಭಾಗ ಎನ್ನಲಾಗಿದೆ. ಆದರೆ ಇಲ್ಲಿ

---
೯. ಬೃಹಜ್ಜಾತಕಮ್

ರವಿಯು ತನ್ನ ಸ್ಥಿತಿವಿಶೇಷದಿಂದ ತಂದೆಯ ವಿಷಯವಾಗಿ ಶುಭಾಶುಭವನ್ನು ನಮ್ಮ ಜನ್ಮಾಂತರದ ಕರ್ಮಗಳಿಗೆ ಅನುಸಾರವಾಗಿ ಮಾಡುತ್ತಾನೆ. ಆದ್ದರಿಂದ ಶುಭಫಲಸೂಚಕರಾದ ಗ್ರಹಗಳೇ ಶುಭಗ್ರಹಗಳೆನಿಸುತ್ತಾರೆ. ಪಾಪಫಲಸೂಚಕರಾದ ಅರ್ಥಾತ್ ಅಶುಭಫಲಸೂಚಕರಾದ ಗ್ರಹಗಳೇ ಅಶುಭಗ್ರಹಗಳೆನಿಸುತ್ತಾರೆ.

**ಪ್ರಶ್ನ:**

ಜಾತಕವಿಲ್ಲ, ಜನ್ಮಸಮಯದ ಪರಿಜ್ಞಾನವಿಲ್ಲ, ಪ್ರಾರಬ್ಧ ಫಲ ಕಂಡುಹಿಡಿಯಬೇಕು. ಜಾತಕ ರಚನೆ ಮಾಡಬಹುದೇ? ಜಾತಕದಲ್ಲಿ ಈಗ ಕಾಲವು ಉತ್ತಮವಿದೆ. ನಾನೀಗ ಕಷ್ಟದಲ್ಲಿದ್ದೇನೆ ಇದಕ್ಕೆ ಕಾರಣವೇನು? ಬಾಧೆಯಾದರೆ ಯಾವ ಬಾಧೆ? ರೋಗವಾದರೆ ಎಲ್ಲಿ ಇದರ ಮೂಲ? ಇತ್ಯಾದಿ ಪ್ರಶ್ನೆಗಳಿಗೆ ಪ್ರಶ್ನಶಾಸ್ತ್ರದಿಂದ ಉತ್ತರಿಸಬೇಕಷ್ಟೇ. ಇದನ್ನೆ ಪ್ರಶ್ನಮಾರ್ಗದಲ್ಲಿ ಹೀಗೆ ಹೇಳಿದ್ದಾರೆ,

**ಕಸ್ಯ ಪಕ್ತಿರಿತಿ ಜ್ಞಾತುಮಿದಾನೀಂ ಪೂರ್ವಕರ್ಮಣಾಮ್ ।**
**ಇಹಾರ್ಜಿತಂಚ ವಿಜ್ಞಾತುಂ ಕರ್ಮ ಪ್ರಶ್ನೋ ವಿಧೀಯತೇ ॥**[೧೦]

**ಪ್ರಶ್ನೆಗಳು ಈ ಕೆಳಗಿನಂತಿವೆ.**

- ಅಷ್ಟಮಂಗಲ ಪ್ರಶ್ನೆ
- ಆರೂಢ ಪ್ರಶ್ನೆ
- ಆಯುಃ ಪ್ರಶ್ನೆ
- ರೋಗ ಪ್ರಶ್ನೆ
- ನಷ್ಟ ಪ್ರಶ್ನೆ
- ಸ್ವಪ್ನ ಪ್ರಶ್ನೆ

**"ದೇವೈರ್ವಾಧರ್ಮದೆವೈಃ ಫಣಿಪಿತೃಗುರುಭಿಃ ಬ್ರಾಹ್ಮಣೈಃ ಪ್ರೇತಭೂತೈಃ**
**ಪೀಡಾಯಾಸ್ಯಾತ್ಕೃತಾಸಾತದನುಭವತಿಯಾದೃಗ್ಭವಾವಾಗ್ಭವಾವಾ ।**
**ಯಾಸ್ಯಾದ್ಭೂಯೋವಿಷೋತ್ಥಾಪುನರಿಹರಿಪುಭಿರ್ಯಾಕೃತಾಸಾಚ**
**ತಾಸಾಂ ಹೇತುಶ್ಚಾಪಿ ಕ್ರಮೇಣಪ್ರತಿವಿಧಿರಪಿಚ ಪ್ರೋಚ್ಯತೇಪೃಥಕ್ಕಾನಾಮ್ ॥"** [೧೧]

| | |
|---|---|
| ೧. ದೇವ | ೨. ಧರ್ಮದೇವ |
| ೩. ಫಣಿ | ೪. ಪಿತೃ ಕೋಪ |

೧೦. ಪ್ರಶ್ನಮಾರ್ಗ
೧೧. ಪ್ರಶ್ನಮಾರ್ಗ

೫. ಗುರು ಶಾಪ ೬. ಬ್ರಾಹ್ಮಣ ಶಾಪ
೭. ಪ್ರೇತ ೮. ಭೂತ
೯. ದೃಷ್ಟಿ ಬಾಧೆ ೧೦. ವಾಗ್ ದೋಷ
೧೧. ಕೈ ವಿಷ ಭೋಜನ ೧೨. ಶತ್ರುಕೃತ ಅಭಿಚಾರ

ಇವುಗಳಿಗೆ ಸಂಬಂಧಪಟ್ಟ ಶುಭಾಶುಭಫಲಗಳನ್ನು ಪ್ರಶ್ನೆಯ ಮೂಲಕ ತಿಳಿದುಕೊಳ್ಳಬಹುದಾಗಿದೆ.

**ಮುಹೂರ್ತಮ್**

"ಕಾಲಃ ಶುಭಕ್ರಿಯಾಯೋಗ್ಯೋ ಮುಹೂರ್ತ ಇತಿ ಕಥ್ಯತೇ" ಮೂಹೂರ್ತ ಎಂದರೆ ಶುಭಕ್ರಿಯೆಗೆ ಯೋಗ್ಯವಾದ ಸಮಯ ಎಂದರ್ಥ. ಈ ಕಾಲವಿಶೇಷವು ತಿಥಿವಾರನಕ್ಷತ್ರಯೋಗಕರಣ ಲಗ್ನಗ್ರಹಸ್ಥಿತ್ಯಾದಿಗಳ ಕೂಡುವಿಕೆಯಿಂದ ಉಂಟಾಗುತ್ತದೆ. ವಿಶಿಷ್ಟವಾದ ಶುಭಮೂಹೂರ್ತದಲ್ಲಿ ಕಾರ್ಯವನ್ನು ಮಾಡುವುದರಿಂದ ಆ ಕಾರ್ಯವು ನಿರ್ವಿಘ್ನವಾಗಿ ಪರಿಸಮಾಪ್ತಿಯಾಗುತ್ತದೆ. ಹಾಗೆಯೇ ಆ ಶುಭಕಾರ್ಯದಿಂದ ಒಳ್ಳೆಯ ಪರಿಣಾಮಗಳೇ ಗೋಚರಿಸುತ್ತವೇ. ಶುಭಕರ್ಮದ ಯಶಸ್ಸಿಗೆ ಹಲವಾರು ಕಾರಣಗಳಿದ್ದರೂ ಅದರಲ್ಲಿ ಶುಭಕಾಲದ ಪಾತ್ರವು ಮಹತ್ವವುಳ್ಳದ್ದಾಗಿದೆ. ಅದುದರಿಂದ ಕರ್ತೃವನ್ನು ಕಷ್ಟಪರಂಪರೆಯಿಂದ ದಾಟಿಸುವ ಕಾಲವಿಶೇಷವೇ ಮುಹೂರ್ತ ಎಂದೂ ನಿರ್ವಚನವನ್ನು ತೋರಿಸುತ್ತಾರೆ.

**ಮುಹುಃ ಮುಹುಃ ತಾರಯತಿ ಕರ್ತಾರಂ ಶ್ರೌತಕರ್ಮಣಾಮ್।**
**ತಸ್ಮಾತ್ ಮುಹೂರ್ತಮಿತ್ಯುಕ್ತಂ ಜ್ಯೋತಿಶ್ಶಾಸ್ತ್ರವಿಶಾರದೈಃ॥**

ಈ ಲಕ್ಷಣವೂ ಮೂಹೂರ್ತಕ್ಕೆ ಹೊಂದಿಕೆಯಾಗುತ್ತದೆ. ಒಟ್ಟಿನಲ್ಲಿ ವೈದಿಕಪ್ರಕ್ರಿಯೆಗಳಲ್ಲಿ ಶುಭಮುಹೂರ್ತವು ಅತ್ಯವಶ್ಯವೆಂಬುದು ಈಗ ದಿಟವಾಯಿತು.

ವೇದಗಳಿಂದಾರಂಭಿಸಿ ಬ್ರಾಹ್ಮಣ, ಗೃಹ್ಯಸೂತ್ರಾದಿಗಳ ಉಲ್ಲೇಖಗಳನ್ನು ಗಮನಿಸಿದಾಗ ನಾಮಕರಣಸೀಮಂತಾದಿ ದಿನಮಾಸವಿಹಿತಕಾರ್ಯಗಳನ್ನು ಬಿಟ್ಟು ಉಳಿದೆಲ್ಲಾ ಕಾರ್ಯಗಳಿಗೆ ಉತ್ತರಾಯಣ, ಶುಕ್ಲಪಕ್ಷ, ಶುಭನಕ್ಷತ್ರಗಳು ಅತ್ಯವಶ್ಯವೆಂದು ತೋರುತ್ತದೆ. "ಉದಗಯನೇ, ಆಪೂರ್ಯಮಾಣಪಕ್ಷೇ, ಕಲ್ಯಾಣೇ ನಕ್ಷತ್ರೇ ಪುಣ್ಯಾಹೇ, ವಿಷ್ಟ್ಯಾದಿ ದೋಷರಹಿತೇ" ಇತ್ಯಾದಿ ಉಲ್ಲೇಖಗಳಿವೆ. ಉತ್ತರಾಯಣವು ದೇವತೆಗಳಿಗೆ ಹಗಲಾದ ಕಾರಣ ದೇವತಾ ಪ್ರೀತಿಕರ ಸತ್ಕರ್ಮಗಳನ್ನು ಉತ್ತರಾಯಣದಲ್ಲಿ ಮಾಡುವುದು ಉತ್ತಮ.

"ಸಪ್ತಾಂಗಸಂಪತ್ತಿಸಮೇತಮೇತನ್ಮುಹೂರ್ತರಾಜ್ಯಂ ಸುಕೃತೋ ಲಭಂತೇ" ಎಂಬ ಉಕ್ತಿಯಂತೆ ಸಪ್ತಾಂಗಸಂಪತ್ತಿನಿಂದ ಸಹಿತವಾದ ಮುಹೂರ್ತ ಬಹಳ ದುರ್ಲಭ. ಮೂಹೂರ್ತಕ್ಕೆ ಯೋಗ್ಯವಾದ ತಿಥಿವಾರನಕ್ಷತ್ರಯೋಗಕರಣಗಳು ಪಂಚಾಂಗಗಳೆನಿಸಿದರೆ ಯೋಗ್ಯವಾದ ಲಗ್ನರಾಶಿಯು ಆರನೇ ಅಂಗವಾಗಿದೆ. ಕರ್ಮಾಂಗಕ್ಕೆ ಅನುಗುಣವಾದ ಭಾವಶುದ್ಧಿಗಳಿಂದ ಕೂಡಿದ ಗ್ರಹಸ್ಥಿತಿಯೂ ದೊರೆತಲ್ಲಿ ಸಪ್ತಾಂಗಸಂಪತ್ತಿನಿಂದ ಕೂಡಿದ ಮುಹೂರ್ತವಾಗುತ್ತದೆ. ಶುಭಕಾಲನಿರ್ಣಯಕ್ಕೆ ಹಲವಾರು ಗುಣಗಳು ದೋಷಗಳು ಇದ್ದು ದೋಷರಹಿತವಾದ ಗುಣಪೂರ್ಣವಾದ ಮುಹೂರ್ತ ದುರ್ಲಭವೇ ಸರಿ, ಹಾಗಾದರೆ ಶುಭಕಾಲನಿರ್ಣಯ ಹೇಗೆ? ಎಂದರೆ,

**"ಕಲಾವದೋಷಃ ಕಾಲೋ ನ, ಮಂದಭಾಗ್ಯೋ ಯತೋ ಜನಃ।**

**ದೋಷೇಽಲ್ಪೇಽತೋ ಬಹುಗುಣೇ ಕರ್ಮಕುರ್ವಂತಿ ಮಾನವಾಃ॥**

ಮಂದಭಾಗ್ಯವುಳ್ಳ ಜನರುಳ್ಳ ಕಲಿಯುಗದಲ್ಲಿ ದೋಷವಿಲ್ಲದ ಕಾಲವೇ ಇಲ್ಲ. ಆದ್ದರಿಂದ ಅಲ್ಪದೋಷ ಮತ್ತು ತುಂಬಾ ಗುಣವುಳ್ಳ ಸಮಯದಲ್ಲಿ ಮಾನವರು ಶುಭಕಾರ್ಯಗಳನ್ನು ಆಚರಿಸುತ್ತಾರೆ. ಈ ರೀತಿ ಮುಹೂರ್ತನಿರ್ಣಯದಲ್ಲಿ ಗುಣದೋಷಗಳ ಜ್ಞಾನದ ಜೊತೆಗೆ ಅವುಗಳ ಬಲಾಬಲವಿಮರ್ಶಯೂ ಅತ್ಯವಶ್ಯ.

**ಸಹಾಯಕ ಗ್ರಂಥಗಳ ಸೂಚಿ**


೧. ಋಗ್ವೇದ

೨. ಜ್ಯೋತಿಶ್ಶಾಸ್ತ್ರೇತಿಹಾಸ

೩. ವೇದಾಂಗ ಜ್ಯೋತಿಷಮ್

೪. ಬೃಹಜ್ಜಾತಕ

೫. ತೈತ್ತರೀಯ ಬ್ರಾಹ್ಮಣ

೬. ಪ್ರಶ್ನಮಾರ್ಗ

೭. ನಾರದ ಸಂಹಿತೆ

೮ ಮನಸ್ಮೃತಿ

೯. ಅಮರಕೋಶ